ಪವಮಾನ ಪವಮಾನ ಜಗದ ಪ್ರಾಣ
ಸಂಕರುಷಣ ಭವ ಭಯಾರಣ್ಯ ದಹನ । ಪ ।
ಶ್ರವಣವೆ ಮೊದಲಾದ ನವವಿಧ ಭಕುತಿಯ
ತವಕದಿಂದಲಿ ಕೊಡು ಕವಿಜನಪ್ರಿಯಾ । ಅಪ ।

ಹೇಮ ಕಚ್ಚೂಟ ಉಪವೀತ ಧರಿಪ ಮಾರುತ
ಕಾಮಾದಿವರ್ಗರಹಿತಾ ವ್ಯೋಮಾದಿ ಸರ್ವ ವ್ಯಾಪುತಾ ಸತತ ನಿರ್ಭೀತಾ
ರಾಮಚಂದ್ರನ ನಿಜದೂತ ಯಾಮ ಯಾಮಕೆ ನಿನ್ನಾರಾಧಿಪುದಕೆ
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ ಈ ಮನಸಿಗೆ ಸುಖಸ್ತೋಮವ
ತೋರುತ ಪಾರಮತಿಯನು ನೀಮಾಣಿಪುದೋ ॥ 1 ॥

ವಜ್ರ ಶರೀರ ಗಂಭೀರ ಮುಕುಟಧರ ದುರ್ಜನವನಕುಠಾರ
ನಿರ್ಜರಮಣಿ ದಯಾ ಪಾರಾವಾರಾ ಉದಾರ ಸಜ್ಜನರಘಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ಮೂರ್ಜಗವರಿವಂತೆ
ಗರ್ಜನೆ ಮಾಡಿದೆ ಹೆಜ್ಜೆ ಹೆಜ್ಜೆಗೆ ನಿನ್ ಅಬ್ಜ ಪದದದೂಳಿ ಮಜ್ಜನದಲಿ
ಭವವರ್ಜಿತವೆನಿಸೋ ॥ 2 ॥

ಪ್ರಾಣ ಅಪಾನ ವ್ಯಾನ ಉದಾನ ಸಮಾನ ಆನಂದ ಭಾರತಿ ರಮಣ
ನೀನೆ ಶರ್ವಾದಿಗೀರ್ವಾಣಾದ್ಯಮರರಿಗೆ ಜ್ಞಾನಧನಪಾಲಿಪ ವರೇಣ್ಯ
ನಾನು ನಿರುತದಲಿ ಏನೇನೆಸಗುವೆ ಮಾನಸಾದಿ ಕರ್ಮ
ನಿನಗೊಪ್ಪಿಸಿದೆನೋ ಪ್ರಾಣನಾಥ ಸಿರಿವಿಜಯವಿಠಲನ
ಕಾಣಿಸಿಕೊಡುವುದು ಭಾನುಪ್ರಕಾಶ ॥ 3 ॥